ಉ) ಕೊಡಗು ಜಿಲ್ಲೆಯನ್ನು ಈಗಾಗಲೇ ಅಭಾವ ಪೀಡಿತವೆಂದು ಗುರುತಿಸಲಾಗಿದೆ. ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಅನುವಾಗುವಂತೆ ಸಾಕಷ್ಟು ಹಣವನ್ನು ಕೂಡ ಬಿಡುಗಡೆ ಮಾಡಿದ್ದು ಮೇಲೆ (ಈ)ಗೆ ನೀಡಿದ ಉತ್ತರದಲ್ಲಿ ನಮೂದಿಸಿದ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ವೀರಣ್ಣ (ಕಂದಾಯ ಸಚಿವರ ಪರವಾಗಿ).—ಈಗಾಗಲೇ ಕೊಡಗು ಜಿಲ್ಲೆಗೆ ಏಪ್ರಿಲ್ ತಿಂಗಳಿಂದ ೩೯ ಲಕ್ಷ ರೂಪಾಯಿ ಹಣವನ್ನು ಎಲ್ಲಾ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿದ್ದೇವೆ.

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೆ, ಸ್ಕೇರ್ಸಿಟಿ ರಿಪೋರ್ಟಿನಲ್ಲಿ ಕೊಡಗು ಜಿಲ್ಲೆಯಲ್ಲಿ ಮಡಿಕೇರಿ ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕಿನಲ್ಲಿ ಹೆಚ್ಚು ಗ್ರಾಮಗಳು ಬರಗಾಲಕ್ಕೆ ಒಳಗಾಗಿವೆ ಎಂದು ಹೇಳಿದ್ದಾರೆ. ಈ ರಿಪೋರ್ಟಿನಲ್ಲಿ ಮಡಿಕೇರಿ ತಾಲ್ಲೂಕಿನಲ್ಲಿ ೬೮ ಗ್ರಾಮಗಳು, ಸೋಮವಾರಪೇಟೆ ತಾಲ್ಲೂಕಿನಲ್ಲಿ ೨೪೮ ಗ್ರಾಮಗಳು ಮತ್ತು ವಿರಾಜಪೇಟೆ ತಾಲ್ಲೂಕಿನಲ್ಲಿ ೩೭ ಗ್ರಾಮಗಳು ಬರಗಾಲಕ್ಕೆ ಒಳಗಾಗಿವೆ ಎಂದು ಹೇಳಿದ್ದಾರೆ, ಈ ವರದಿ ಸರಿಯಲ್ಲ ಎಂದು ಹೇಳುತ್ತಿದ್ದೇನೆ. ಆಮೇಲೆ ೩೯ ಲಕ್ಷ ರೂಪಾಯಿಗಳನ್ನು ಏನು ರಿಲೀಸ್ ಮಾಡಿದ್ದಾರೆ ಅದನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದಾರೋ ಅಥವಾ ಡೆಪ್ಯುಟಿ ಕಮಿಷನರ್‌ಗೆ ಕೊಟ್ಟಿದ್ದಾರೋ ಎಂದು ಕೇಳುತ್ತಿದ್ದೇನೆ.

ಶ್ರೀ ವೀರಣ್ಣ.—೩೯ ಲಕ್ಷ ರೂಪಾಯಿಗಳ ಹಣವನ್ನು ಆಯಾ ಇಲಾಖೆಗೆ ಸಂಬಂಧಪಟ್ಟಂತೆ ರಿಲೀಸ್ ಮಾಡಿರುತ್ತೇವೆ. ಗ್ರಾಮೀಣ ಉದ್ಯೋಗ ಭರವಸೆ ಕೆಳಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಜಿಲ್ಲಾ ಪರಿಷತ್ತಿಗೆ ಕೊಡುತ್ತೇವೆ. ಮೇವಿಗಾಗಿ ಕಾರ್ಯಕ್ರಮಕ್ಕೆ ಜಿಲ್ಲಾ ಪರಿಷತ್ತಿಗೆ ರಿಲೀಸ್ ಮಾಡಿರುತ್ತೇವೆ. ಈಗಾಗಲೇ ಇಡೀ ಕೊಡಗು ಜಿಲ್ಲೆಯಲ್ಲಿ ೩೫೫ ಹಳ್ಳಿಗಳನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲಾಗಿದೆ. ಮಡಿಕೇರಿಯಲ್ಲಿ ೬೮ ಹಳ್ಳಿಗಳು ಸೋಮವಾರಪೇಟೆಯಲ್ಲಿ ೨೪೯ ಹಳ್ಳಿಗಳು, ವಿರಾಜಪೇಟೆಯಲ್ಲಿ ೩೭ ಹಳ್ಳಿಗಳು ಬರಗಾಲಕ್ಕೆ ಸಿಕ್ಕಿವೆ. ಕೊಡಗು ಜಿಲ್ಲೆಯನ್ನು ಈಗಾಗಲೇ ಅಭಾವ ಪೀಡಿತ ಪ್ರದೇಶವೆಂದು ಗುರುತಿಸಲಾಗಿದೆ ಎಂದು ಹೇಳಿದ್ದೇನೆ. ಬರಪರಿಹಾರ ಕಾರ್ಯಕ್ರಮದಲ್ಲಿ ಏನೇನು ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಆ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ.

ಶ್ರೀ ಡಿ. ಎ. ಚಿನ್ನಪ್ಪ.—ಬರಪೀಡಿತ ಪ್ರದೇಶದಲ್ಲಿ ಈಗಾಗಲೇ ಆಸಿಸ್ಟೆಂಟ್ ಕಮಿಷನರ್‌ರವರು ಇರಿಗೇಷನ್ ಟ್ಯಾಕ್ಸನ್ನು ವಸೂಲಿ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದಾರೆ. ಮನೆಯನ್ನು ಜಪ್ತಿ ಮಾಡುವುದಕ್ಕೂ ಹೇಳುತ್ತಿದ್ದಾರೆ. ಅದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ವೀರಣ್ಣ.—ಮಾನ್ಯ ಕಂದಾಯ ಮಂತ್ರಿಗಳು ಇದೇ ವಿಧಾನಸಭೆಯಲ್ಲೇ ಹೇಳಿದ್ದಾರೆ. ೨ ತಿಂಗಳ ಕಾಲ ಯಾವುದೇ ರೀತಿಯ ಸಾಲವನ್ನು ವಸೂಲು ಮಾಡದೆ ಇರುವುದಕ್ಕೆ ಸೂಚನೆ ಕೊಟ್ಟಿದ್ದೇನೆ ಎಂದು.

ಶ್ರೀ ಡಿ. ಎ. ಚಿನ್ನಪ್ಪ.—ಇರಿಗೇಷನ್ ಟ್ಯಾಕ್ಸನ್ನು ವಸೂಲಿ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಕಳೆದ ೩ ವರ್ಷಗಳಿಂದ ಆ ಪ್ರದೇಶದಲ್ಲೆಲ್ಲಾ ಬರಗಾಲವಿದ್ದು, ಕೆರೆಗಳಲ್ಲಿ ನೀರೇ ಇಲ್ಲ. ಯಾವುದೇ ಬೆಳೆಯನ್ನು ಬೆಳೆದಿಲ್ಲ. ಆದರೂ ವಾಟರ್‌ಟ್ಯಾಕ್ಸನ್ನು ವಸೂಲಿ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಇದನ್ನು ನಿಲ್ಲಿಸುತ್ತೀರಾ?

ಶ್ರೀ ವೀರಣ್ಣ.—ವಾಟರ್‌ಟ್ಯಾಕ್ಸ್ ಬಗ್ಗೆ ಮಾನ್ಯ ಸದಸ್ಯರಾದ ಚಿನ್ನಪ್ಪನವರು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಳ್ಳುತ್ತೇವೆ. ಎಲ್ಲೆಲ್ಲಿ ಅಭಾವ ಪೀಡಿತ ಪ್ರದೇಶವಾಗಿದೆ, ಎಲ್ಲಿ ರೈತರು ಬೆಳೆಯನ್ನು ಬೆಳೆದಿಲ್ಲವೋ, ನೀರಿನ ಅಭಾವದಿಂದ ಅಂತಹ ಕಡೆ ವಾಟರ್ ಟ್ಯಾಕ್ಸನ್ನು ವಸೂಲು ಮಾಡುವಂತಹ ಪ್ರಶ್ನೆಯೇ ಬರುವುದಿಲ್ಲ. ಆದರೆ ಎಲ್ಲಿ ನೀರನ್ನು ಉಪಯೋಗ ಮಾಡಿಕೊಂಡು ಬೆಳೆಯನ್ನು ಬೆಳೆದಿದ್ದಾರೆ, ಅಂತಹವರೂ ಕೂಡ ವಾಟರ್‌ಟ್ಯಾಕ್ಸನ್ನು ಕೊಡುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಉಗ್ರಾಣಿಗಳ ಮಾಸಿಕ ವೇತನದ ಬಗ್ಗೆ

೯೬ (೨೬೬) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಉಗ್ರಾಣಿಗಳು ಇದ್ದಾರೆ?

ಆ) ಇವರಿಗೆ ನೀಡುವ ಮಾಸಿಕ ವೇತನ ಎಷ್ಟು ?

ಇ) ಇವರ ವೇತನವನ್ನು ಹೆಚ್ಚು ಮಾಡಲಾಗಿದೆಯೆ, ಇಲ್ಲವಾದಲ್ಲಿ ಇವರ ವೇತನ ಪರಿಷ್ಕರಣ ಸರ್ಕಾರದವರು ಶೀಘ್ರ ಮಾಡುವರೆ ?

ಶ್ರೀ ಎಸ್ ಆರ್. ಬೊಮ್ಮಾಯಿ(ಕಂದಾಯ ಮತ್ತು ಯೋಜನಾ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೭೦ ಉಗ್ರಾಣಿಗಳು(ಗ್ರಾಮ ಸಹಾಯಕರು)ಇದ್ದಾರೆ.

ಆ) ಇವರುಗಳಿಗೆ ತಿಂಗಳಿಗೆ ೩೦೦–ರೂ.ಗಳ ನಿಗಧಿತ ಸಂಭಾವನೆ ಪಾವತಿ ಮಾಡಲಾಗುತ್ತಿದೆ.

ಇ) ಹೌದು. ದಿನಾಂಕ ೧-೧೧-೮೬ ರಿಂದ ಇವರುಗಳಿಗೆ ಪ್ರತಿ ತಿಂಗಳು ಕೊಡುವ ಸಂಭಾವನೆಯನ್ನು ೧೫೦–ರೂ.ಗಳಿಂದ ೩೦೦–ರೂ.ಗಳಿಗೆ ಹೆಚ್ಚಿಸಲಾಗಿದೆ. ವೇತನ ಪರಿಷ್ಕರಣಕ್ಕಾಗಿ ಮನವಿಗಳು ಬಂದಿದ್ದು, ಅವುಗಳನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೭೦ ಗ್ರಾಮಗಳಲ್ಲಿ ಉಗ್ರಾಣಿಗಳು (ಗ್ರಾಮ ಸೇವಕರು)ಇದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅನೇಕ ಕಡೆಗಳಲ್ಲಿ ಗ್ರಾಮ ಸೇವಕರು ಇಲ್ಲದೆ ಅಲ್ಲಿ ಕೆಲಸಕಾರ್ಯಗಳು ಮಂದಗತಿಯಲ್ಲಿ ನಡೆಯುತ್ತಿರುವುದು ಸಚಿವರ ಗಮನಕ್ಕೆ ಬಂದಿದೆಯೇ?

ಶ್ರೀ ವೀರಣ್ಣ.—ಗ್ರಾಮಲೆಕ್ಕಿಗರು ಇಲ್ಲದೆ ಇದ್ದಾಗ ಬಹುಶಃ ಇವರದ್ದೇ ಹೆಚ್ಚಿನ ಕೆಲಸ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಅವರಿಗೆ ಕೊಡತಕ್ಕ ಸಂಬಳ ಮೊದಲು ಕೇವಲ ೧೫೦ ಇದ್ದುದನ್ನು ಅವರ ಕೆಲಸ ಕಾರ್ಯಗಳನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಸಂಬಳವನ್ನು ೩೦೦ ರೂಪಾಯಿಗಳಿಗೆ ಹೆಚ್ಚು ಮಾಡಿದೆ.. ಅದಕ್ಕಿಂತ ಹೆಚ್ಚಿಗೆ ಮಾಡತಕ್ಕ ಪ್ರಶ್ನೆ ಸರ್ಕಾರದ ಮುಂದೆ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಇನ್ನೂ ಕೆಲವು ಗ್ರಾಮಗಳಲ್ಲಿ ಗ್ರಾಮ ಸೇವಕರು ಇಲ್ಲದೆ ಕೆಲಸ ಮಾಡುವುದು ಕಷ್ಟವಾಗಿದೆ ಅವರಿಗೆ ಕೊಡತಕ್ಕ ಸಂಬಳ ೩೦೦ ರೂಪಾಯಿಗಳು. ಅವರು ಇಷ್ಟು ಗ್ರಾಮಗಳನ್ನು ಸುತ್ತಾಡಿ ಎಲ್ಲವನ್ನೂ ನೋಡಬೇಕು. ಅವರ ವೇತನವನ್ನು ಪರಿಷ್ಕರಣ ಮಾಡಿ ಎಂಬುದಾಗಿ ಕೇಳಿಕೊಳ್ಳುತ್ತಿದ್ದೇನೆ. ಅವರು ಬಹಳ ಕಷ್ಟದಲ್ಲಿರತಕ್ಕ ಜನ. ೩೦೦ ರೂಪಾಯಿಗಳು ಈಗಿನ ಕಾಲದಲ್ಲಿ ಯಾವುದಕ್ಕೂ ಸಾಕಾಗುವುದಿಲ್ಲ.

ಶ್ರೀ ವೀರಣ್ಣ.—ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಸದ್ಯಕ್ಕೆ ಆ ಪ್ರಶ್ನೆ ಸರ್ಕಾರದ ಮುಂದೆ ಇಲ್ಲ.

ಖಾಸಗಿ ಸಕ್ಕರೆ ಕಾರ್ಖಾನೆಗಳ ಬಗ್ಗೆ

೯೮ (ಳಿಳಿ ಇ) ಶ್ರೀ ಬಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿ ಎಷ್ಟು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಹಸ್ತಾಂತರಿಸಲಾಗಿದೆ ?

(ಆ) ಇದಕ್ಕೆ ಕಾರಣವೇನು ? ಹಸ್ತಾಂತರದ ಪರತ್ತು ಹಾಗೂ ಮೌಲ್ಯಗಳೇನು ?

(ಇ) ಯಾವುದಾದರು ಬೇರೆ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರುವ ಯೋಜನೆ ಇದೆಯೇ ? ಹಾಗಿದ್ದಲ್ಲಿ ಅವು ಯಾವುವು ಮತ್ತು ಯಾವಾಗ ?

ಶ್ರೀ ಆರ್, ಬಿ. ಪೋತ್‌ದಾರ್ (ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ಒಂದೇ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯಾದ ಶ್ರೀ ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಕೊಳ್ಳೇಗಾಲ, ಮೈಸೂರು ಜಿಲ್ಲೆ ಇದನ್ನು ಮೇ · ಖೋಡೆ ಡಿಸ್ಟಿಲರೀಸ್ ರವರಿಗೆ ಮಾರಾಟ ಮಾಡಲಾಗಿದೆ.

ಆ) ಮಾರಾಟ ಮಾಡಲು ಕಾರಣಗಳು :